ಇಂದು ದಿ**: 02.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು **4** ಮತ್ತು **5** ನೇ ಪ್ರತಿವಾದಿಯ ಪರಃ ಶ್ರೀ ಎಂ ಎಸ್ ಎಸ್ ವಕೀಲರಿಂದ

ಸರ್ವೆ ನಂ. 70 ಕ್ಕೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ಸರ್ವೆ ನಂ. 70 ರಲ್ಲಿ ಎಷ್ಟು ಪೋಡುಗಳು ಇರುತ್ತವೆ ಎಂದು ಗೊತ್ತಿರುವುದಿಲ್ಲ. ಯಾವ ಯಾವ ಪೋಡಿನಲ್ಲಿ ಯಾರು ಇರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಎಲ್ಲಾ ಪೋಡುಗಳ ಚೆಕ್ಕುಬಂದಿಯನ್ನು ಹೇಳಲು ಅಗುವುದಿಲ್ಲ. 4 ಮತ್ತು 5 ನೇ ಪ್ರತಿವಾದಿಗಳು ಯಾವ ಪೋಡಿನಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದು ಗೊತ್ತಿರುವುದಿಲ್ಲ. 4 ಮತ್ತು 5 ನೇ ಪ್ರತಿವಾದಿಗಳು ತಿಮ್ಮಪ್ಪನ ಮಕ್ಕಳು. ದಾವಾ ಆಸ್ತಿಯ ದಾಖಲೆ ಯಾರ ಹೆಸರಿಗೆ ಇರುತ್ತದೆ ಎಂದು ನೋಡಿರುತ್ತೇನೆ. ಸರ್ವೆ ನಂ. 70/2 ಎ ಜಮೀನಿನ ಚೆಕ್ಕು ಬಂದಿಯನ್ನು ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳ ಅಕ್ಕಪಕ್ಕದಲ್ಲಿ ನಮ್ಮ ಜಮೀನು ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಏನೇನು ಬರವಣಿಗೆ ಆಗಿದೆ ಎಂದು ನನಗೆ ನೆನಪು ಇರುವುದಿಲ್ಲ. ನಾನು ವಕೀಲರಿಗೆ ಹೇಳಿ ಪ್ರಮಾಣ ಪತ್ರ ಬರೆಸಿಲ್ಲ ಎಂದರೆ ಸಾಕ್ಷಿ ನೆನಪು ಇಲ್ಲ ಎಂದು ಹೇಳುತ್ತಾರೆ.

ಪೂರ್ವಕ್ಕೆ ತಿಮ್ಮಪ್ಪ, ಪಶ್ಚಿಮಕ್ಕೆ ಸಣ್ಣೀರಪ್ಪ , ಉತ್ತರಕ್ಕೆ ಕರಡಿ ರಾಮಯ್ಯ,ದಕ್ಷಿಣಕ್ಕೆ ತಿಮ್ಮಯ್ಯ ಶಿವಮೊಗ್ಗದ ಸುಬ್ಬಯ್ಯ ಈ ಚೆಕ್ಕುಂಬಂದಿಯ ಮಧ್ಯದ ಜಮೀನನ್ನು 4 ಮತ್ತು 5 ನೇ ಪ್ರತಿವಾದಿಯಗಳು ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಅವರ ಜಮೀನನ್ನು ಅವರು ಉಳುಮೆ ಮಾಡುತ್ತಿದ್ದು ಇವರ ಜಮೀನನ್ನು ಇವರು ಉಳುಮೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. 4 ಮತ್ತು 5 ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿರುವ ಜಮೀನಿಗೂ ವಾದಿಗಳ ಜಮೀನಿಗೂ ಸಂಬಂಧ ಇಲ್ಲ ಎನ್ನುವುದು ನಿಜ. 4 ಮತ್ತು 5 ನೇ ಪ್ರತಿವಾದಿಗಳು ಸಾಗುವಳಿ ಮಾಡುತ್ತಿರುವ ಜಮೀನಿನ ಚೆಕ್ಕು ಬಂದಿ ಹೇಳಲು ಆಗುವುದಿಲ್ಲ. 4 ಮತ್ತು 5 ನೇ ಪ್ರತಿವಾದಿಗಳು ಸರ್ವೆ ನಂ. 70 ರಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಅದರ ಪೋಡ್ ನಂಬರ್ ನೆನಪು ಇರುವುದಿಲ್ಲ. ವಾದಿಗಳೊಂದಿಗೆ ನಾನು ವಿಶ್ವಾಸದಿಂದ ಇರುವ ಕಾರಣ ಅವರ ಪರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳು ಎಂದಿಗೂ ಅನುಭವಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 4 ಮತ್ತು 5 ನೇ ಪ್ರತಿವಾದಿಗಳು ಅನುಭವಿಸುತ್ತಿದ್ದು, ನಾನು ವಾದಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.